**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 37/2021**

**ಪಿ ಡಬ್ಲ್ಯೂ/1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 13/03/2024.**

**ಪಾಟೀ ಸವಾಲುಃ ಶ್ರೀ ಎಸ್ ಎಮ್ ಎಮ್ ವಕೀಲರಿಂದ 1 ಹಾಗೂ 2 ನೇ ಪ್ರತಿವಾದಿ ವಕೀಲರುಃ**

1. ನಮ್ಮ ಕುಟುಂಬದ ಮೂಲ ಪುರುಷನ ಹೆಸರು ಹುಸನಮಿಯಾ ಇಬ್ರಾಹಿಮಸಾಬ ಮುಲ್ಲಾ. ಹುಸೇನಮಿಯಾ ಇವರಿಗೆ ಮೂರು ಜನ ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಗಳು. ಸದರಿ ಹುಸೇನಮಿಯಾ ಇವರ ವಂಶಾವಳಿಯನ್ನು ಸಂಬಂದಪಟ್ಟ ಗ್ರಾಮ ಪಂಚಾಯಿತಿ ಅಥವಾ ಗ್ರಾಮಲೆಕ್ಕಾಧಿಕಾರಿ ಇವರಿಂದ ಪಡೆದು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ನಮ್ಮ ತಂದೆಯದ್ದು ವಂಶವೃಕ್ಷವನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಈ ದಾವೆಯ ವಾದ ಪತ್ರದೊಂದಿಗೆ ಸದರಿ ಹುಸೇನಮಿಯಾ ಇವರ ವಂಶಾವಳಿಯನ್ನು ಪ್ರತ್ಯೇಕವಾಗಿ ಕಾಣಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

2. ಹುಸೇನಮಿಯಾ ಇವರ ಹೆಂಡತಿಯ ಹೆಸರು ಸಾರಾಬೀ ಆಗಿರುತ್ತದೆ. ಹುಸೇನಮಿಯಾ ನನಗೆ ಅಜ್ಜ ಆಗಬೇಕು. ಹುಸೇನಮಿಯಾ ಇವರ ತಂದೆಯ ಹೆಸರು ಇಬ್ರಾಹಿಂಸಾಬ. ಹುಸೇನಮಿಯಾ ಇವರ ತಂದೆ ಹೆಸರು ಇಬ್ರಾಹಿಂಸಾಬ ಅಲ್ಲ ಮಹ್ಮದಸಾಬ ಅಂದರೆ ಸರಿಯಲ್ಲ. ಸದರಿಯವರ ಹೆಸರು ಮಹ್ಮದಸಾಬ ಇದ್ದರು ಸಹ ಹುಸೇನಮಿಯಾ ಅಂತ ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

3. ಹುಸೇನಮಿಯಾ ಇವರ ಮೂರು ಜನ ಗಂಡು ಮಕ್ಕಳು ಈಗ ತೀರಿಕೊಂಡಿರುತ್ತಾರೆ ಎಂದರೆ ಸರಿ. ಹುಸೇನಮಿಯಾ ಇವರಿಗೆ ಸೇರಿದ ಎಷ್ಟು ಆಸ್ತಿಗಳು ಕಳಸ ಗ್ರಾಮದಲ್ಲಿ ಇವೆ ಎಂದರೆ ಸಾಕ್ಷಿ ಮನೆ ನಂಃ98 ಮಾತ್ರ ಇದೆ ಎಂದು ನುಡಿಯುತ್ತಾರೆ. ವಿಪಿಸಿ ನಂಃ999 ಹುಸೇನಮಿಯಾ ಅವರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ವಿಸಿಪಿ ನಂಃ999 ಒಟ್ಟಾರೆ ಎಷ್ಟು ಗುಂಟೆ ಆಸ್ತಿ ಎಂದರೆ ಸಾಕ್ಷಿ ಒಂದು ಪ್ಲಾಟ 18 ಪೂಟು ಉದ್ದ ಹಾಗೂ 19 1/2 ಪೂಟು ಅಗಲ, ಅದೇ ರೀತಿ ಉತ್ತರದ ಕಡೆಗೆ ಒಂದು ಜಾಗೆ 9 ಪೂಟು ಉದ್ದ ಹಾಗೂ 6 ಪೂಟು ಅಗಲ ಇರುತ್ತದೆ.

4. ಮೇಲೆ ಹೇಳಿದ 18 ಪೂಟೂ ಹಾಗೂ 19 ಪೂಟೂ ಜಾಗೆಯ ಚಕ್ಕುಬಂದಿ ಹೇಳಲಾಗುತ್ತಾ ಎಂದರೆ ಸಾಕ್ಷಿ ಹೇಳಲಾಗುತ್ತೆ ಪೂರ್ವಕ್ಕೆ ಶಿವಮೂರ್ತಪ್ಪ ಬಾರಕೇರ, ಪಶ್ಚಿಮಕ್ಕೆ ಮಾಬುಸಾಬ ಹುಸೇನಮಿಯಾ ಮುಲ್ಲಾ ಅವರದ್ದು ಖಾತೆ ಇರುವುದಿಲ್ಲ, ಆದರೆ ಅವರು ಅಲ್ಲಿ ವಾಸವಾಗಿರುತ್ತಾರೆ, ಉತ್ತರಕ್ಕೆ ಮೈಬುಸಾಬ ಮುಲ್ಲಾ ಹಾಗೂ ದಕ್ಷಿಣಕ್ಕೆ ಹಜರೇಸಾಬ ಮುಲ್ಲಾ ಎಂದು ನುಡಿಯುತ್ತಾರೆ. ಅದೇ ರೀತಿ 9 ಪೂಟು ಹಾಗೂ 6 ಪೂಟೂ ಜಾಗೆಯ ಚಕ್ಕುಬಂದಿ ಹೇಳೀಲಾಗುತ್ತಾ ಎಂದರೆ ಸಾಕ್ಷಿ ಹೇಳಲಾಗುತ್ತೆ ಪೂರ್ವಕ್ಕೆ ಶಿವಮೂರ್ತಪ್ಪ ಬಾರಕೇರ, ಪಶ್ಚಿಮಕ್ಕೆ ಬಾಷಾಸಾಬ ಅವರದ್ದು ಖಾತೆ ಇರುವುದಿಲ್ಲ, ಆದರೆ ಅವರು ಅಲ್ಲಿ ವಾಸವಾಗಿರುತ್ತಾರೆ, ಉತ್ತರಕ್ಕೆ ಸರಕಾರಿ ರಸ್ತೆ ಹಾಗೂ ದಕ್ಷಿಣಕ್ಕೆ ನಮ್ಮ ಉಳಿದ ಜಾಗ ಎಂದು ನುಡಿಯುತ್ತಾರೆ. ಈ ರೀತಿ 6X9 ನಮಗೆ ಸೇರಿದ ಹಿತ್ತಲು ಅಂತ ಹೇಳಿದ್ದು, ಅದಕ್ಕೆ ಏನಾದರು ನಂಬರ ಇದಿಯಾ ಎಂದರೆ ಸಾಕ್ಷಿ ಅದು 999 ಆಗಿರುತ್ತದೆ ಎಂದು ನುಡಿಯುತ್ತಾರೆ.

5. ವಿಪಿಸಿ ನಂಃ999 ಆಸ್ತಿಯನ್ನು ನಾನು ಖರೀದಿ ಹಿಡಿದಿರುತ್ತೇನೆ ಅಂತ ಹೇಳಿದ್ದು ಅದನ್ನು ನಾನು ರೂ 2,000/ ಕ್ಕೆ 1987 ರಲ್ಲಿ ರಶೀದಅಹ್ಮದ ಇಬ್ರಾಹಿಂಸಾಬ ಮುಲ್ಲಾ, ರಿಯಾಜ ಅಹ್ಮದ, ಬಸೀರಅಹ್ಮದ, ಜಾಫರಅಹ್ಮದ ಹಾಗೂ ಅವರ ತಾಯಿ ಕಾತುಂಬಿ ಇವರಿಂದ ಖರೀದಿಸಿರುತ್ತೇನೆ.

(ಈ ಹಂತದಲ್ಲಿ 1 ಹಾಗೂ 2 ನೇ ಪ್ರತಿವಾದಿ ಪರ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ**